ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/01/ಇಬಿಎಲ್(4)2017

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-01,
ದಿನಾಂಕ:06.12.2017.

**ಸುತ್ತೋಲೆ**

**ವಿಷಯ:** ಪರೀಕ್ಷಾ ಕಾರ್ಯ ನಿರ್ವಹಿಸುವ ಬೋಧಕ/ಬೋಧಕೇತರ ಸಿಬ್ಬಂದಿ ವರ್ಗದವರಿಗೆ ಸಂಭಾವನೆ ಭತ್ಯೆ / ಪ್ರಯಾಣ ಭತ್ಯೆ/ದಿನಭತ್ಯೆಗಳನ್ನು ಖಜಾನೆಯ ಆರ್.ಟಿ.ಜಿ.ಎಸ್ / ಎನ್.ಇ.ಎಫ್.ಟಿ ಮುಖಾಂತರ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡುವ ಬಗ್ಗೆ.

**ಉಲ್ಲೇಖ:1** ಸರ್ಕಾರದ ಆದೇಶ ಸಂಖ್ಯೆ:ಆಇ/47/ಟಿಎಆರ್/2014, ದಿನಾಂಕ: 22-12-2014.

**2** ಈ ಕಛೇರಿ ಸುತ್ತೋಲೆ ಸಂಖ್ಯೆ:ಬಿಟಿಇ/3/ಇಬಿಎಲ್(1) 2015-16, 2016-17, ದಿನಾಂಕ:4-5-2016.

**3.** ಈ ಕಛೇರಿ ಸುತ್ತೋಲೆ ಸಂಖ್ಯೆ:ಬಿಟಿಇ/1/ಇಬಿಎಲ್(4)2017, ದಿನಾಂಕ:16-06-2017.

**4.** ಈ ಕಛೇರಿ ಸುತ್ತೋಲೆ ಸಂ:ಬಿಟಿಇ/1/ಇಬಿಎಲ್(4)2017, ದಿನಾಂಕ:11-09-2017.

-0-

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಉಲ್ಲೇಖ(1)ರ ಸರ್ಕಾರದ ಆದೇಶದಂತೆ, ಉಲ್ಲೇಖ(2),(3) ಮತ್ತು (4)ರ ಈ ಕಛೇರಿ ಸುತ್ತೋಲೆಗಳತ್ತ ಕಡೆಗೆ ಗಮನ ಸೆಳೆಯುತ್ತಾ, ಮೌಲ್ಯಮಾಪನ ಹಾಗೂ ಇನ್ನಿತರ ಪೂರಕ ಪರೀಕ್ಷಾ ಕಾರ್ಯ ನಿರ್ವಹಿಸಿದ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿನ ಉಪನ್ಯಾಸಕರು/ಕಾರ್ಯಗಾರ ಸಿಬ್ಬಂದಿ/ಬೋಧಕೇತರ ಸಿಬ್ಬಂದಿ ವರ್ಗದವರಿಗೆ ಪಾವತಿಸುವ ಸಂಭಾವನೆ/ದಿನಭತ್ಯೆ/ಪ್ರಯಾಣ ಭತ್ಯೆಯನ್ನು ಖಜಾನೆಯ ಆರ್.ಟಿ.ಜಿ.ಎಸ್./ಎನ್.ಇ.ಎಫ್.ಟಿ ಮುಖಾಂತರ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡಬೇಕಾಗಿರುತ್ತದೆ. ಈ ಪದ್ಧತಿಯನ್ನು 2016ನೇ ಸಾಲಿನಿಂದ ಜಾರಿಗೊಳಿಸಿರುವುದರಿಂದ ಫಲಾನುಭವಿಗಳ ಹೆಸರು, ಬ್ಯಾಂಕ್ ಖಾತೆ ಸಂಖ್ಯೆ, ಬ್ಯಾಂಕಿನ ಐ.ಎಫ್.ಎಸ್.ಸಿ. ಸಂಕೇತ ಮುಂತಾದ ವಿವರಗಳೊಂದಿಗೆ ಖಜಾನೆಗೆ ಹಣ ಸೆಳೆಯುವ ಅಧಿಕಾರಿಯು (ಡಿಡಿಓ) ಸಾದಿಲ್ವಾರು ಬಿಲ್ಲನ್ನು ಸಲ್ಲಿಸಬೇಕಾಗಿರುತ್ತದೆಂದು ಸೂಚಿಸಲಾಗಿರುತ್ತದೆ. ಆದರೂ ಕೂಡ ಬಿಲ್ಲುಗಳನ್ನು ಸಲ್ಲಿಸುವಾಗ ಪದೇಪದೇ ಬ್ಯಾಂಕ್ ಖಾತೆಯನ್ನು ಬದಲಾಯಿಸುವುದು ಹಾಗೂ ಸ್ಪಷ್ಟ ಮಾಹಿತಿಯನ್ನು ನೀಡದೆ ಇರುವುದರಿಂದ ಬಿಲ್ಲುಗಳು ಸ್ಥಗಿತಗೊಂಡು ನಿಗದಿತ ಅವಧಿಯಲ್ಲಿ ವಿಲೇ ಮಾಡಲು ಸಾಧ್ಯವಾಗದೆ ಅನಗತ್ಯವಾಗಿ ಕಾರ್ಯ ನಿರ್ವಹಣೆಯಲ್ಲಿ ವಿಳಂಬವಾಗುತ್ತಿದೆ. ಇದಕ್ಕೆ ಅವಕಾಶ ಕೊಡದಂತೆ ಈ ಕೆಳಕಂಡ ದಾಖಲೆಗಳನ್ನು ಕಡ್ಡಾಯವಾಗಿ ಬಿಲ್ಲಿನೊಂದಿಗೆ ಸಲ್ಲಿಸಲು ಸೂಚಿಸಲಾಗಿದೆ.

**<u>ಸಂಭಾವನೆ/ಪ್ರಯಾಣ ಭತ್ಯೆ/ದಿನಭತ್ಯೆ ಬಿಲ್ಲುಗಳನ್ನು ಅಗತ್ಯ ದಾಖಲೆಗಳೊಂದಿಗೆ ಏಕಪ್ರತಿಯಲ್ಲಿ ಸಲ್ಲಿಸಿ ಒಂದು ಪ್ರತಿಯನ್ನು ತಮ್ಮಲ್ಲಿಯೇ ಇಟ್ಟುಕೊಳ್ಳತಕ್ಕದ್ದು.</u>**

**<u>ಕೇಂದ್ರ ಮೌಲ್ಯಮಾಪನ/ಮರುಮೌಲ್ಯಮಾಪನದ ಪ್ರಯಾಣ ಭತ್ಯೆ/ದಿನಭತ್ಯೆ/ಸಂಭಾವನೆ ಬಿಲ್ಲುಗಳಿಗೆ ಲಗತ್ತಿಸಬೇಕಾದ ಪೂರಕ ದಾಖಲೆಗಳು</u>**

1. ಮೌಲ್ಯಮಾಪನ ಕಾರ್ಯಕ್ಕೆ ಹಾಜರಾಗಲು ನೀಡಿರುವ ನೇಮಕಾತಿ ಆದೇಶದ ಪ್ರತಿ.
2. ಮೂಲ ಹಾಜರಾತಿ ಪ್ರಮಾಣ ಪತ್ರ (Form X)ನ್ನು ಪ್ರಯಾಣ ಭತ್ಯೆ/ದಿನಭತ್ಯೆ ಬಿಲ್ಲಿಗೆ ಲಗತ್ತಿಸುವುದು.
3. ಸಂಭವನೆ ಬಿಲ್ಲಿಗೆ ವ್ಯಾಲ್ಯೂಯರ್ ಸರ್ಟಿಫಿಕೇಟ್ ಹಾಗೂ ಎ.ಐ.ಸಿ.ಟಿ.ಇ. ವೇತನ ಪಡೆಯದಿರುವ ಬಗ್ಗೆ ಪ್ರಾಂಶುಪಾಲರಿಂದ ದೃಢೀಕರಿಸಿದ ಪ್ರಪತ್ರ ಲಗತ್ತಿಸಬೇಕು.
4. ಸಂಭಾವನೆ ಹಾಗೂ ಪ್ರಯಾಣ ಭತ್ಯೆ/ದಿನಭತ್ಯೆ ಬಿಲ್ಲುಗಳನ್ನು ಒಟ್ಟಿಗೆ ಸೇರಿಸುವುದು.
5. ಮೇಲ್ಕಂಡ ಬಿಲ್ಲುಗಳಿಗೆ ಕ್ಯಾಂಪ್ ಆಫೀಸರ್ ಸಹಿ ಇರಬೇಕು. ಹಾಗೂ ಕ್ಯಾಂಪ್ ಆಫೀಸರ್ ಮಾದರಿ ಸಹಿಯನ್ನು ಪರೀಕ್ಷಾ ಮಂಡಳಿಯ ಬಿಲ್ಸ್ ವಿಭಾಗಕ್ಕೆ ಕಳುಹಿಸುವುದು.
6. ಉಪನ್ಯಾಸಕರ ಬಿಲ್ಲುಗಳಲ್ಲಿ ತಮ್ಮ ಹೆಸರನ್ನು ಆಂಗ್ಲ ಭಾಷೆಯಲ್ಲಿ(CAPITAL LETTERS) ದಪ್ಪ ಅಕ್ಷರಗಳಲ್ಲಿ ಬಿಡಿಬಿಡಿಯಾಗಿ ಬರೆಯುವುದು.
7. ಪ್ರತಿ ಬಿಲ್ಲಿಗೂ ಅಕೌಂಟ್ ನಂಬರ್ ಹಾಗೂ ಐ.ಎಫ್.ಎಸ್.ಸಿ. ಸಂಕೇತವನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಲಾಗಿರುವ ನಮೂನೆಯಲ್ಲಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
8. ಬ್ಯಾಂಕ್ ಖಾತೆಯ ಸಂಖ್ಯೆಯನ್ನು ಪದೇ ಪದೇ ಬದಲಾವಣೆ ಮಾಡತಕ್ಕದ್ದಲ್ಲ. ವೇತನ ನೀಡುವ ಬ್ಯಾಂಕ್ ಖಾತೆಯ ಸಂಖ್ಯೆಯನ್ನು ನಮೂದಿಸತಕ್ಕದ್ದು.

9. ಇದಲ್ಲದೆ ಪ್ರಶ್ನೆ ಪತ್ರಿಕೆಗಳನ್ನು ಸಂರಕ್ಷಿಸುವ ಕಾರ್ಯ ನಿಮಿತ್ತ ಖಜಾನೆ ಸಿಬ್ಬಂದಿ ಹಾಗೂ ಆರಕ್ಷಕ ಠಾಣೆ ಸಿಬ್ಬಂದಿಯವರ ಸಂಭಾವನೆಯ ಭತ್ಯೆಯ ಬಿಲ್ಲುಗಳಿಗೂ ಸಹ ಬ್ಯಾಂಕ್ ಖಾತೆಯ ಮಾಹಿತಿಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಬಿಲ್ಲುಗಳನ್ನು ವಿಲೇ ಮಾಡಲು ಸಾಧ್ಯವಾಗುತ್ತಿಲ್ಲ. ಈ ಪತ್ರದೊಂದಿಗೆ ಲಗತ್ತಿಸಿರುವ ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದೆಂದು ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರುಗಳು ಸೂಚಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ಪರೀಕ್ಷಾ ಬಿಲ್ಲಿಗೆ ಸಂಬಂಧಪಟ್ಟ ಮಾಹಿತಿಯನ್ನು bteebl2016@gmail.com ಇಮೇಲ್ ಐಡಿ ವಿಳಾಸಕ್ಕೆ ಕಳುಹಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

**ವಿಶೇಷ ಸೂಚನೆ: ಲೆಕ್ಕ ಶಾಖೆಗೆ ಸಂಬಂಧಿಸಿದಂತೆ, ಲೆಕ್ಕಾಧಿಕಾರಿ (ಪರೀಕ್ಷೆ)ಗಳೊಂದಿಗೆ ನೇರವಾಗಿ ಸಂಪರ್ಕಿಸುವುದು ಹಾಗೂ ಪತ್ರ ವ್ಯವಹಾರಗಳನ್ನು ಸಹ ಅವರ ವಿಳಾಸದೊಂದಿಗೆ ನಡೆಸುವುದು.**

6.12.17

**ಲೆಕ್ಕಾಧಿಕಾರಿ(ಪರೀಕ್ಷೆ)**
**ತಾಂತ್ರಿಕ ಪರೀಕ್ಷಾ ಮಂಡಳಿ,**
**ಬೆಂಗಳೂರು.**

6/12/17

ಇವರಿಗೆ:

3. ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಸಂಸ್ಥೆಯ ಪ್ರಾಚಾರ್ಯರುಗಳಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
4. ಪ್ರಶ್ನೆ ಪತ್ರಿಕೆಗಳನ್ನು ಸಂರಕ್ಷಣಾ ಕಾರ್ಯ ನಿರ್ವಹಿಸುವ ಜಿಲ್ಲ/ತಾಲ್ಲೂಕು ಉಪ ಖಜಾನಾಧಿಕಾರಿಗಳು ಹಾಗೂ ಆರಕ್ಷಣ ಠಾಣೆ ಅಧಿಕಾರಿಗಳಿಗೆ ಸದರಿ ಸುತ್ತೋಲೆಯನ್ನು ಅವಗಾಹನೆಗೆ ತರಬೇಕೆಂದು ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರುಗಳಿಗೆ ಸೂಚಿಸಲಾಗಿದೆ.

ಪ್ರತಿ:

ಶ್ರೀ ಶ್ರೀನಿವಾಸ್, ಸಂಯೋಜನಾಧಿಕಾರಿ, ಹೆಚ್.ಆರ್.ಎಂ.ಎಸ್.ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಇವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.

| FORMAT | |
| --- | --- |
| INSTITUTION NAME | |
| INSTITUTION CODE | |
| EMPLOYEE NAME<br><br>(CAPITAL LETTERS) | |
| DESIGNATION | |
| BRANCH (Subject wise) | |
| BASIC PAY | |
| KGID NO./EMPLOYEE No. | |
| Existing Receipient ID (If any) | |
| BANK ACCOUNT NO.<br>(A/C No. Details in Pass Book Xerox) | |
| IFSC CODE | |
| NAME OF THE BANK | |
| NAME OF THE BANK BRANCH | |
| ACCOUNT TYPE | |
| PHONE NUMBER | |
| | |